**ದಿನಾಂಕಃ 24-07-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ ಅದರಲ್ಲಿ ಬರೆದಿರುವ ವಿಷಯಗಳು ನಾನೇ ಹೇಳಿ ಬರೆಸಿದ್ದೇನೆ. ಸದರಿ ಸಂಗತಿಗಳು ಸತ್ಯದಿಂದ ಕೂಡಿರುತ್ತವೆ.

**ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ ಸಿ ಬಿ ಕೆ ವಕೀಲರಿಂದಃ**

ಅಪಘಾತಕ್ಕೆ ಸಂಬಂಧಿಸಿದ ಪ್ರ.ವ.ವರದಿಯ ದೃಡೀಕೃತ ನಕಲನ್ನು ಕೊಟ್ಟಿದ್ದು ಅದನ್ನು ನಿ ಪಿ -1 ಎಂದು, ಪಿರ್ಯಾದಿಯ ದೃಡೀಕ್ರತ ನಕಲನ್ನು ಕೊಟ್ಟಿದ್ದು ಅದನ್ನು ನಿ ಪಿ -2 ಎಂದು, ಸ್ಥಳ ಪಂಚನಾಮೆಯನ್ನು ಕೊಟ್ಟಿದ್ದು ಅದನ್ನು ನಿ ಪಿ -3 ಎಂದು, ವಾಹನದ ಜಪ್ತಿ ಪಂಚನಾಮೆಯನ್ನು ಕೊಟ್ಟಿದ್ದು ಅದನ್ನು ನಿ ಪಿ -4 ಎಂದು, ಐಎಂವಿ ವರದಿಯ ದೃಡೀಕೃತ ನಕಲನ್ನು ಕೊಟ್ಟಿದ್ದು ಅದನ್ನು ನಿ ಪಿ -5 ಎಂದು, ಅಂತಿಮ ವರದಿಯನ್ನು ನಿಪಿ -6 ಎಂದು, ಗಾಯದ ಪ್ರಮಾಣ ಪತ್ರವನ್ನು ನಿ ಪಿ -7 ಎಂದು, ಡಿಸ್ಚಾರ್ಜ ಸಮ್ಮರಿಯನ್ನು ನಿ ಪಿ -8 ಎಂದು, ಮೆಡಿಕಲ್ ಬಿಲ್ಲನ್ನು ನಿ ಪಿ -9 ಎಂದು, ಒಪಿಡಿ ಕಾರ್ಡನ್ನು ನಿ ಪಿ -10 ಎಂದು,ಅಂಗನ್ಯೂನತ ಪ್ರಮಾಣ ಪತ್ರವನ್ನು ಕೊಟ್ಟಿದ್ದು ಅದನ್ನು ನಿ ಪಿ 11 ಎಂದು, ಎರಡು ಎಕ್ಸರೆ ಪಿಲಂ/ ಕ್ಷ-ಕಿರಣ ಫಿಲಂ ನ್ನು ಒಟ್ಟಾಗಿ ಕೊಟ್ಟಿದ್ದು ಅದನ್ನು ನಿ ಪಿ 12 ಎಂದು, ಗುರುತಿಸಲಾಯಿತು.

ಅರ್ಜಿದಾರರ ಮೂಲ ಆದಾರ ಕಾರ್ಡ, ಪ್ಯಾನ ಕಾರ್ಡ ಬ್ಯಾಂಕ್ ಪಾಸ್ ಬುಕ್ ಮೂಲ ದಾಖಲೆಗಳ ಜೊತೆ ಅವುಗಳ ನೋಟರಿ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಮೂಲ ದಾಖಲೆಗಳ ಜೊತೆ ಪರಿಶೀಲಿಸಿದ ನಂತರ ಸದರಿ ದಾಖಲೆಗಳು ದಿನ ಬಳಕೆಗೆ ಬೇಕಾಗಿರುವುದರಿಂದ ಅವುಗಳ ನೋಟರಿ ಪ್ರತಿಗಳನ್ನು ನಿ ಪಿ-13 ರಿಂದ ನಿ ಪಿ-15 ಎಂದು ಗುರುತಿಸಲಾಯಿತು. ಅರ್ಜಿದಾರರ ಮೂಲ ಆದಾರ ಕಾರ್ಡ, ಪ್ಯಾನಕಾರ್ಡ, ಬ್ಯಾಂಕ್ ಪಾಸ್ ಬುಕ್ ಗಳನ್ನು ಅರ್ಜಿದಾರರಿಗೆ ಹಿಂದುರಿಗಿಸಲಾಯಿತು.

ಅರ್ಜಿಯಲ್ಲಿ ಕೇಳಿದಂತೆ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಪಿ ಕೆ ವಕೀಲರಿಂದಃ**

ನಾನು ಕಾರ್ಪೆಂಟರ್ ಕೆಲಸ ಮಾಡುತ್ತಿದ್ದೇನೆ ಹಾಗೂ ತಿಂಗಳಿಗೆ 30,000 ಸಂಪಾದನೆ ಮಾಡುತ್ತಿದ್ದೇನೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಶಿಕಾರಿಪುರ ಆಸ್ಪತ್ರೆಯವರು ನೀಡಿದ ಗಾಯದ ಪ್ರಮಾಣ ಪತ್ರವನ್ನು ಹಾಜರುಪಡಿಸಲು ತೊಂದರೆ ಇಲ್ಲ. ಅಪಘಾತದ ಸಮಯದಲ್ಲಿ ಬಸ್ಸಿನಲ್ಲಿ ಪ್ರಯಾಣಿಕನಾಗಿ ಪ್ರಯಾಣ ಮಾಡುತ್ತಿದ್ದೇನು ಎಂದರೆ ನಿಜ. ಅಪಘಾತಕ್ಕಿಂತ ಮೊದಲು ದಿನಕ್ಕೆ ರೂ.500 ರಂತೆ ದುಡಿಮೆ ಮಾಡುತ್ತಿದ್ದೆ ಈಗ 200 ರಿಂದ

250 ದುಡಿಯುತ್ತೇನೆ. ಮೆಗ್ಗಾನ ಆಸ್ಪತ್ರೆ ಮತ್ತು ಶಿಕಾರಿಪುರ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆ ನೀಡುತ್ತಾರೆ ಎಂದರೆ ನಿಜ. ಅಪಘಾತದಲ್ಲಿ ನನಗೆ ಬಲಗೈ ಮತ್ತು ಬಲ ಮೊಣಕಾಲಿಗೆ ಗಾಯಿವಾಗಿರುತ್ತದೆ ಸದರಿ ಗಾಯಗಳಿಗೆ ಆಪರೇಷನ್ ಆಗಿರುವುದಿಲ್ಲ. ನಾನು 1987 ರಲ್ಲಿ ಜನಿಸಿರುತ್ತೇನೆ. ಶಾಲಾ ದಾಖಲಾತಿಯನ್ನು ಹಾಜರುಪಡಿಸಿಲು ಯಾವುದೇ ತೊಂದರೆ ಇಲ್ಲ. ನನಗೆ ಅಂಗನ್ಯೂನತೆ ಉಂಟಾಗಿಲ್ಲ ಎಂದರೆ ಸರಿಯಲ್ಲ. ಆದರೂ ಸಹ ಸುಳ್ಳು ಅಂಗನ್ಯೂನತೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/–

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.